ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಕಾಮಾಕ್ಷೀ ವಿಲಾಸಂ

    

ಜ್ಞಾನಾನಂದ ಮಯಂ ದೇವಂ ನಿರ್ಮಲಸ್ಫಟಿಕಾಕೃತಿಂ ।

ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೇ ॥

ಭಗವತಿಯ ಪ್ರೇರಣೆಯಿಂದ ಆವಿರ್ಭವಿಸಿದ ಶ್ರೀಮಹಾವಿಷ್ಣುವಿನ ಅವತಾರ ಶ್ರೀಹಯಗ್ರೀವ ಸ್ವಾಮಿ. ಲೋಕಕಂಟಕನಾದ ಹಯಗ್ರೀವನೆಂಬ ದಾನವನನ್ನು ಸಂಹರಿಸಿ, ಲೋಕ ಕಲ್ಯಾಣವನ್ನು ಮಾಡಿದ ಭಗವಾನ್ ಹಯಗ್ರೀವ. ಯೋಗಮಾಯೆಯಾದ ಶ್ರೀಮಾತೆಯ ತತ್ತ್ವವನ್ನೂ, ಮಹಿಮೆಯನ್ನೂ ಸಂಪೂರ್ಣವಾಗಿ ತಿಳಿದ ಶ್ರೀವಿದ್ಯಾ - ಮೋಕ್ಷವಿದ್ಯಾ ಉಪಾಸಕ.

ಜ್ಞಾನಿನಾಮಪಿ ಚೇತಾಂಸಿ ದೇವೀ ಭಗವತೀ ಹಿ ಸಾ ।

ಬಲಾದಾಕೃಷ್ಯ ಮೋಹಾಯ ಮಹಾಮಾಯಾ ಪ್ರಯಚ್ಛತಿ ॥

ತಯಾ ವಿಸೃಜ್ಯತೇ ವಿಶ್ವಂ ಜಗದೇತ ಚ್ಛರಾಚರಮ್ ।

ಸೈಷಾ ಪ್ರಸನ್ನಾ ವರದಾ ನೃಣಾಂ ಭವತಿಮುಕ್ತಯೇ ॥

ಸಾ ವಿದ್ಯಾ ಪರಮಾ ಮುಕ್ತೇರ್ಹೇತುಭೂತಾ ಸನಾತನೀ ।

ಸಂಸಾರ ಬಂಧಹೇತುಶ್ಚ ಸೈವ ಸರ್ವೇಶ್ವರೇಶ್ವರೀ ॥

ಹಯಗ್ರೀವ ಸ್ವಾಮಿಯ ತಪೋಕ್ಷೇತ್ರ ಕಾಮಕೋಷ್ಠಂ - ಕಾಮಕೋಟಿ ಪೀಠ - ಕಾಂಚೀಪುರಂ.

ತತ್ಕಾಮಕೋಷ್ಠೇ ಯೇ ಸಂತಿ ಮಹೇಶ್ವರ್ಯೇವ ತೇಖಿಲಾ ।

ತಸ್ಮಾತ್ಕಾಂಚೀಪುರಂ ಭೂಮೌ ಕಾಮಕೋಷ್ಠಧರಾತಲಮ್ ॥

ಶ್ರೀಪುರ, ಕೈಲಾಸ, ವೈಕುಂಠಗಳ ದರ್ಶನಭಾಗ್ಯವನ್ನು ಏಕಕಾಲದಲ್ಲಿ ನೀಡುವ ಮೋಕ್ಷಪುರೀ, ಹರಿಹರ ಕ್ಷೇತ್ರ, ಶಿವಶಕ್ತ್ಯಾತ್ಮಕ ಕ್ಷೇತ್ರ ಕಾಂಚೀಪುರಂ.

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀಹ್ಯವಂತಿಕಾ ।

ಪುರೀ ದ್ವಾರವತೀ ಚೈವ ಸಪ್ತೈತಾ ಮೋಕ್ಷದಾಯಿಕಾ ॥

ಈ ಸಪ್ತಪುರಿಗಳೂ ಮೂಲಾಧಾರಾದಿ ಸಹಸ್ರಾರಾಂತ ಸಪ್ತ ಚಕ್ರಗಳ ಸಂಕೇತ. ಸುಷುಮ್ನಾ ನಾಡಿಯಿಂದ ಕುಂಡಲಿನಿಗೆ ಆಧಾರವಾಗಿ ಕಟಿಸ್ಥಾನದಲ್ಲಿರುವುದು ಮೂಲಾಧಾರ ಚಕ್ರ. ಕಟಿಯಲ್ಲಿರುವ ಆಭರಣ ಕಾಂಚಿ.

ಮಹಾಪಾಶುಪತಾಸ್ತ್ರಾಗ್ನಿ ನಿರ್ದಗ್ಧಾ ಸುರಸೈನಿಕಾ ।

ಮೂಲಾಧಾರಾ ಚಕ್ರದಲ್ಲಿರುವ ಅಗ್ನಿ ಪ್ರಜ್ವಲನೆಯಾಗಿ, ಅಜ್ಞಾನದ ಅಸುರೀ ಶಕ್ತಿಗಳನ್ನು ಬಂಧಿಸಿ, ನಿಗ್ರಹಿಸಿದ ದೇವೀ ತತ್ತ್ವ ಪ್ರಕಟವಾಗಿರುವ ಕ್ಷೇತ್ರ ಕಾಂಚೀಪುರಂ. ಇದು ಪ್ರಥಮ ಉಪಾಸನಾ ಪೀಠ.

ಶ್ರೀಮದ್ವಾಗ್ಭವಕೂಟೈಕ ಸ್ವರೂಪ ಮುಖಪಂಕಜಾ ।

ಕಂಠಾದಃ ಕಟಿಪರ್ಯಂತ ಮಧ್ಯಕೂಟ ಸ್ವರೂಪಿಣೀ ॥

ಶಕ್ತಿಕೂಟೈಕತಾಪನ್ನ ಕಟ್ಯಧೋಭಾಗಧಾರಿಣೀ ।

ಮೂಲಮಂತ್ರಾತ್ಮಿಕಾ ಮೂಲಕೂಟತ್ರಯಕಲೇಬರಾ ॥

ಶ್ರೀವಿದ್ಯಾ ಮಂತ್ರದ ರಹಸ್ಯಾರ್ಥ ಅಡಗಿದ್ದು ಶ್ರೀಮಾತೆಯ ಸೂಕ್ಷ್ಮಸ್ವರೂಪ ಬಿಂಬಿಸುವ ಪಂಚನಾಮಗಳು.

ಶ್ರೀಮದ್ವಾಗ್ಭವಕೂಟೈಕ ಸ್ವರೂಪ ಮುಖಪಂಕಜಾ ।

ಕಂಠಾದಃ ಕಟಿಪರ್ಯಂತ ಮಧ್ಯಕೂಟ ಸ್ವರೂಪಿಣೀ ॥

ಶಕ್ತಿಕೂಟೈಕತಾಪನ್ನ ಕಟ್ಯಧೋಭಾಗಧಾರಿಣೀ ।

ಈ ನಾಮತ್ರಯದಲ್ಲಿ ಶ್ರೀಮಾತೆಯ ಪಂಚದಶಾಕ್ಷರೀ ಮಂತ್ರದ ವಾಗ್ಭವಕೂಟ, ಮಧ್ಯಕೂಟ, ಶಕ್ತಿಕೂಟಗಳ ಪ್ರತಿಪಾದನೆ. ದೇವಿಯ ಶಕ್ತಿಪೀಠಗಳಲ್ಲಿ ಅತ್ಯುತ್ತಮವೆನಿಸಿಕೊಂಡ ಕಾಮರಾಜ, ಜಾಲಂಧರ, ಓಡ್ಯಾಣ ಪೀಠಗಳಲ್ಲಿ ಈ ಕೂಟತ್ರಯದ ಉಪಾಸನೆ ಭಗವಾನ್ ಹಯಗ್ರೀವ, ಭೃಗುಮಹರ್ಷಿ ಹಾಗೂ ವೇದವ್ಯಾಸರಿಂದ.

" ಕ ಏ ಈ ಲ ಹ್ರೀಂ " ಬೀಜಮಂತ್ರಗಳನ್ನೊಳಗೊಂಡ ಕಾಮರಾಜ ಪೀಠ, ಶ್ರೀಲಲಿತಾ ವಿದ್ಯೆಯನ್ನು ಹಯಗ್ರೀವಸ್ವಾಮಿ ಅಗಸ್ತ್ಯ ಮಹಾಮುನಿಗಳಿಗೆ ಉಪದೇಶಿಸಿದ ವಾಗ್ಭವಕೂಟ.

ಷೋಡಾನ್ಯಾಸಾದಯೋನ್ಯಾಸಾ ನ್ಯಾಸಖಂಡೇ ಸಮೀರಿತಾಃ ।

ಅಂತರ್ಯಾಗ ಕ್ರಮಶ್ಚೈವ ಬಹಿರ್ಯಾಗ ಕ್ರಮಸ್ತಥಾ ॥

ಶ್ರೀಮತ್ಪಂಚದಶಾಕ್ಷರ್ಯಾಃ ಮಹಿಮಾ ವರ್ಣಿತಸ್ತಥಾ ।

ಮಹಾಯಾಗ ಕ್ರಮಶ್ಚೈವ ಪೂಜಾಖಂಡೇ ಪ್ರಕೀರ್ತಿತಃ ॥

ಬಂಧಕಾಸುರನ ದುಷ್ಟಶಕ್ತಿ ಸರ್ವಪ್ರಪಂಚವನ್ನು ಪೀಡಿಸುತ್ತಿರುವಾಗ ಚತುರ್ಮುಖ ಬ್ರಹ್ಮ, ವಿಷ್ಣು, ಮಹೇಶ್ವರ ಮತ್ತು ಸಮಸ್ತ ದೇವತಾ ಗಣಗಳಿಂದ ಪ್ರಾರ್ಥಿಸಲ್ಪಟ್ಟು, ಮಹಾಬಿಲದಿಂದ ಆವಿರ್ಭವಿಸಿ, ಬಂಧಕಾಸುರನನ್ನು ನಿಗ್ರಹಿಸಿದ ದೇವಕಾರ್ಯ ಸಮುದ್ಯತಳ ಅನುಗ್ರಹಕ್ಕೆ ಪಾತ್ರರಾಗಲು ಶ್ರೀಚಕ್ರವನ್ನು ಪೂಜಿಸಬೇಕೆಂದೂ, ಪಂಚದಶಾಕ್ಷರೀ ಮಂತ್ರವನ್ನು ಜಪಿಸಬೇಕೆಂದೂ, ತ್ರಿಪುರಾ ಸಿದ್ಧಿಯೇ ಚಕ್ರೇಶ್ವರಿಯಾಗಿರುವ ಸರ್ವರೋಗಹರ ಚಕ್ರವಾಸಿನಿಯರಾದ ವಶಿನಿ, ಕಾಮೇಶ್ವರಿ, ಮೋದಿನಿ, ವಿಮಲೆ, ಅರುಣ, ಜಯಿನಿ, ಸರ್ವೇಶ್ವರಿ, ಕೌಳಿನಿ ಎಂಬ ವಾಗ್ದೇವತೆಯರಿಂದ ವಿರಚಿತ ಲಲಿತಾ ಸಹಸ್ರನಾಮ ಪಾರಾಯಣೆ ಮಾಡಬೇಕೆಂದು ಭಗವನ್ ಹಯಗ್ರೀವರು, ಕುಂಭಸಂಭವ ಅಗಸ್ತ್ಯ ಮಹಾಋಷಿಗಳಿಗೆ ಉಪದೇಶಿಸಿದ ಪರಮ ಪಾವನ ವಾಗ್ಭವಕೂಟ ಕಾಮಕೋಟಿ ಪೀಠ ಕ್ಷೇತ್ರ ಕಾಂಚೀಪುರಂ.

ದೂರ್ವಾಸ ಮಹಾಮುನಿ, ಭೃಗು ಪರಶುರಾಮ, ಧೌಮ್ಯಮಹಾಮುನಿ ಮತ್ತು ಶಂಕರ ಭಗವತ್ಪಾದರ ರೂಪಗಳಲ್ಲಿ ಅವತರಿಸಿ, ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳಲ್ಲಿ ಸಾಕ್ಷಾತ್ ಪರಮೇಶ್ವರನಿಂದಲೆ ಪೂಜಾವಿಧಿಗಳನ್ನು ನಿಯಮಿಸಿ, ಅದರಂತೆಯೇ ನೆರವೇರಿಸಿಕೊಳ್ಳುತ್ತಿರುವ ಮಹತ್ತರ ಸನಾತನ ಶಕ್ತಿಪೀಠ ಕಾಮಕೋಟಿ ಪೀಠ.

ಪರಮಜ್ಞಾನ ಲತಾಲವಾಲಂ ಭವ್ಯತರ ಸುಮನೋಜಾಲಂ ।
ಪರಮತ ಖಂಡನ ಚಂಡಿಮ ಶೀಲಂ ಪರಮಾದ್ವೈತ ಸ್ಥಾಪನ ಲೀಲಂ ॥
ಶಂಕರಾಚಾರ್ಯಂ ! ಶ್ರೀಮಚ್ಛಂಕರಾಚಾರ್ಯಂ !

ಸೌರ - ಶಾಕ್ತ - ಗಾಣಪತ್ಯ - ಶೈವ - ವೈಷ್ಣವ - ಸ್ಕಂದ ಮತಗಳನ್ನು ಸಂಸ್ಕಾರ ಮಾಡಿ, ಷಣ್ಮತ ಸ್ಥಾಪನಾಚಾರ್ಯರಾಗಿ, ಸಮನ್ವಯ ಸೂತ್ರಗಳ ಪ್ರಚಾರಕ್ಕಾಗಿ ದೇಶದ ನಾಲ್ಕು ದಿಕ್ಕುಗಳಲ್ಲಿ ಚತುರಾಮ್ನಾಯ ಪೀಠ ಸ್ಥಾಪನೆ ಮಾಡಿ, ಧರ್ಮೋದ್ಧಾರವನ್ನು ಸಾಧಿಸಿದ ಮಹಾನುಭಾವರು ಶ್ರೀ ಆದಿ ಶಂಕರಾಚಾರ್ಯರು. ಸರ್ವಶಾಸ್ತ್ರಪಾರಂಗತರಾಗಿ ವೇದಾಂತ ರಹಸ್ಯಗಳಿಗೆ ಭಾಷ್ಯ ಬರೆದಿದ್ದು ಮಾತ್ರವಲ್ಲದೇ, ತಮ್ಮ ಮಹಾದ್ಭುತ ಕವಿತಾಶಕ್ತಿಯಿಂದ ಆಸೇತುಹಿಮಾಚಲದಲ್ಲಿರುವ ದೇವತಾ ಕ್ಷೇತ್ರಗಳನ್ನು ಸಂದರ್ಶಿಸಿ, ಆಯಾ ಕ್ಷೇತ್ರಾದಿ ದೇವದೇವಿಯರನ್ನು ಸ್ತುತಿಸಿ, ನಮಗೆ ನೀಡಿರುವ ಸ್ತೋತ್ರಗಳು - ಪಂಚಕಗಳು, ಅಷ್ಟಕಗಳು, ಭುಜಂಗಪ್ರಯಾತ ಸ್ತೋತ್ರಗಳು, ಕರಾವಲಂಬ ಸ್ತೋತ್ರಗಳು, ಮಾನಸಿಕ ಪೂಜಾ ಸ್ತೋತ್ರಗಳು, ಸೌಂದರ್ಯಲಹರಿ, ಶಿವಾನಂದಲಹರಿ ಮುಂತಾದವು. ಶ್ರೀಮಾತೆಯ ಅನುಗ್ರಹದಿಂದ ಅವರ ಪ್ರತಿಯೊಂದು ಕೃತಿಯಲ್ಲಿಯೂ ಅಂತರ್ಗತವಾಗಿ ಕಂಡುಬರುವುದು ಶ್ರೀಚಕ್ರದ ವೈಭವ, ವರ್ಣನೆ,

ಜಗನ್ಮಾತೆ ಮತ್ತು ಜಗತ್ಪಿತರ ರೂಪ ಭಾವಗಳ ಪ್ರಕಾಶ ವೈಭವ. ಶ್ರೀಶಂಕರರು ಸಾತ್ತ್ವಿಕ ಬೀಜಾಕ್ಷರಗಳಿಂದೊಡಗೂಡಿದ ಶ್ರೀಚಕ್ರವನ್ನು ಪ್ರತಿಷ್ಠಾಪಿಸಿದ ಶಕ್ತಿಪೀಠ ಕಾಂಚೀಪುರಂ.

ನವ ಶ್ರೀಚಕ್ರರೂಪ - ನವಾವರಣ ಶಕ್ತಿದೇವತೆಗಳ ಸಹಿತವಾಗಿ ಕಾಮೇಶ್ವರೀ ಕಾಮೇಶ್ವರರು ಶಿವಶಕ್ತ್ಯೈಕ್ಯರೂಪದಲ್ಲಿ ಸಾಕ್ಷಾತ್ಕರಿಸುವ ಶ್ರೀಚಕ್ರವಿರುವ ವಾಗ್ಭವಕೂಟ.

ಶಿವಃ ಶಕ್ತ್ಯಾ ಯುಕ್ತೋ ಯದಿಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ।
ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚಾದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥

" ಕ ಏ ಈ ಲ ಹ್ರೀಂ ", " ಹ ಸ ಕ ಹ ಲ ಹ್ರೀಂ ", " ಸ ಕ ಲ ಹ್ರೀಂ " ನಲ್ಲಿ ಬರುವ ಮೂರು ಕ ವರ್ಣಗಳೂ ಮತ್ತು ಎರಡು ಹ ಕಾರಗಳೂ ಶಿವನ ವರ್ಣಭಾಗಗಳೆಂದೂ, ಉಳಿದವುಗಳು ಶಕ್ತಿ ವರ್ಣಗಳೆಂದೂ, ಹ್ರೀಂ ಕಾರವು ಉಭಯಾತ್ಮಕವಾದುದೆಂದೂ ಹೇಳುತ್ತಾ ಶಿವ-ಶಕ್ತಿಯರ ಅವಿನಾಭಾವ ಸಂಬಂಧವನ್ನು ವ್ಯಕ್ತಪಡಿಸುವ ಪಂಚದಶಾಕ್ಷರೀ ಮಂತ್ರದ ಅಕ್ಷರ ಶಕ್ತಿಗಳ ವಿವರಣೆ ಸೌಂದರ್ಯಲಹರಿಯಲ್ಲಿ.

ಶಿವಃ ಶಕ್ತಿಃ ಕಾಮಃ ಕ್ಷಿತಿರಥ ರವಿಃ ಶೀತಕಿರಣಃ
ಸ್ಮರೋ ಹಂಸಃ ಶಕ್ರಃ ತದನು ಚ ಪರಾಮಾರಹರಯಃ ।
ಅಮೀ ಹೃಲ್ಲೇಖಾಭಿಃ ತಿಸೃಭಿರವಸಾನೇಷು ಘಟಿತಾಃ
ಭಜಂತೇ ವರ್ಣಾಸ್ತೇ ತವ ಜನನಿ ನಾಮಾವಯವತಾಮ್ ॥

ಯಾವ ಸೃಷ್ಟಿಯೂ ಇಲ್ಲದಿರುವ ಕಾಲವಾಗಿ ಪರಬ್ರಹ್ಮ ಒಂದೇ ಇರುವ ಸ್ಥಿತಿಯ ಪ್ರತಿಪಾದಕ "ಹ್ರೀಂ" ಬೀಜಾಕ್ಷರ. " ಕ ಏ ಈ ಲ ; ಹ ಸ ಕ ಹ ಲ ; ಸ ಕ ಲ " ಇವು ಸೃಷ್ಟಿ, ವ್ಯಾಪಾರ, ಲಯದ ತತ್ತ್ವಗಳಿಗೆ ಅನುಸಾರವಾಗಿರುವ ಮೂರು ಭಾಗಗಳು. ಸೃಷ್ಟಿಯೆಲ್ಲಾ ವಾಗ್ಭವಕೂಟವೆನಿಸುವ ಕಳಾ ಸ್ವರೂಪ. ಮಧ್ಯದಲ್ಲಿರುವ ವ್ಯಾಪಾರ ಮಧ್ಯಕೂಟ. ವ್ಯಾಪಾರ ಮತ್ತು ಸೃಷ್ಟಿಗಳು ಲಯವಾಗಿ ಸರ್ವವೂ ಶಕ್ತಿರೂಪದಲ್ಲಿ ಬಂದು ನಿಂತು ಪರಬ್ರಹ್ಮ ಸ್ವರೂಪವಾಗುವುದು ಶಕ್ತಿಕೂಟ. ಪಂಚದಶಾಕ್ಷರೀ ಮಂತ್ರದ ವಾಗ್ಭವಕೂಟದಲ್ಲಿರುವ " ಕ ಏ ಈ ಲ " ಎಂಬ ಪ್ರಥಮ ಪಾದದ ಅಕ್ಷರಗಳಿಗೆ ಶಿವಃ, ಶಕ್ತಿಃ, ಕಾಮಃ, ಕ್ಷಿತಿಃ ಎಂಬ ಶ್ರೀಶಂಕರರ ವಿವರಣೆಯನ್ನು ಪ್ರತಿಫಲಿಸುವ ಶಕ್ತಿ ಕೇಂದ್ರ ಕಾಮಕೋಟಿ ಕಾಂಚೀಪುರಂ. ಶುದ್ಧ ಸತ್ತ್ವ ಗುಣದಲ್ಲಿ ಪರಬ್ರಹ್ಮದಿಂದ ಪ್ರತಿಫಲಿತ ಚೈತನ್ಯನಾದ ಶಿವನೂ, ಚಿಚ್ಛಕ್ತಿಯ ಮಹತ್ತ್ವವನ್ನೆಲ್ಲಾ ಒಳಗೊಂಡು

ಇಚ್ಛಾ ಜ್ಞಾನ ಕ್ರಿಯಾ ಪ್ರಧಾನ ಮಾಯೆಯಾದ ಶಕ್ತಿಯೂ, ಆನಂದ ಸ್ವರೂಪವಾದ ಮನ್ಮಥ ಬೀಜವ್ಯಕ್ತ ಶಿವಶಕ್ತಿಯ ಸಂಕಲ್ಪವಾದ ಕಾಮವೂ, ಸರ್ವ ಪ್ರಕೃತಿ ಭೂತಗಳೂ ಸೃಷ್ಟಿ ಸಂಕಲ್ಪವನ್ನು ಅನುಸರಿಸಿ ಸ್ಥೂಲ ಜಗದ್ರೂಪವಾದ ಕ್ಷಿತಿಯೂ ಇರುವ ಕ್ಷೇತ್ರ ಕಾಂಚೀಪುರಂ.

ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾಗಿಯೂ, ಸ್ತ್ರೀಪುಂ ತತ್ತ್ವಗಳಿಗೆ ಉಗಮವಾಗಿಯೂ, ತ್ರಿಮೂರ್ತಿಗಳಿಗೆ ಆದಿಯಾಗಿಯೂ ಇರುವ ಶಕ್ತಿಗೆ ಅಗ್ರಪೂಜೆಯನ್ನು ಸಲ್ಲಿಸಿ, ಈ ಆದಿಶಕ್ತಿಯೇ ಪರಬ್ರಹ್ಮ ಸ್ವರೂಪಿಣಿಯೆಂದು ಉಪಾಸಿಸಿ, ಮೋಕ್ಷಸಾಮ್ರಾಜ್ಯವನ್ನು ಸೇರುವ ಶ್ರೀವಿದ್ಯೆಯೆಂಬ ಮೋಕ್ಷವಿದ್ಯೆಯ ಮೂಲಪೀಠ ಕಾಮಕೋಟಿ ಪೀಠಂ.

ಜಗತ್ ಕಾಮ ಕಲಾಕಾರಂ ನಾಭಿಸ್ಥಾನಂ ಭುವಃ ಪರಮ್ ।
ಪದಪದ್ಮಸ್ಥ ಕಾಮಾಕ್ಷ್ಯಾಃ ಮಹಾಪೀಠಮುಪಾಸ್ಮಹೇ ॥

ದಕ್ಷಯಜ್ಞದಲ್ಲಿ ಹತಳಾದ ಪತ್ನಿ ಸತಿಯ ದೇಹವನ್ನು ಎತ್ತಿಕೊಂಡು ಶಿವ ರುದ್ರ ತಾಂಡವ ಆರಂಭಿಸಿದಾಗ ಅವನ ಸಂತಪ್ತ ಆರ್ಭಟಕ್ಕೆ ಜಗತ್ತೇ ಭಸ್ಮವಾಗುವುದೆಂಬ ಭೀತಿಯಲ್ಲಿ ಶ್ರೀಮಹಾವಿಷ್ಣುವು ಸುದರ್ಶನ ಚಕ್ರದಿಂದ ಸತೀದೇವಿಯ ಶರೀರವನ್ನು ಕತ್ತರಿಸಿದ ತುಂಡುಗಳು ಭೂಮಿಯ ವಿವಿಧೆಡೆಗಳಲ್ಲಿ ಬಿದ್ದ ಜಾಗಗಳೇ ಪೂಜನೀಯ ಶಕ್ತಿಪೀಠಗಳು. ಈ ತಾಣಗಳಲ್ಲಿ ದೇವಿಯ ಶಕ್ತಿ ಪ್ರವಹಿಸುತ್ತಾ ಇರುತ್ತದೆ ಎಂಬ ಗಾಢವಾದ ನಂಬಿಕೆ. ಈ ತುಂಡುಗಳಲ್ಲಿ ನಾಭಿಯ ಭಾಗ ನೆಲ ಸೇರಿದ್ದು ಕಾಂಚೀಪುರಂನಲ್ಲಿ. ಹೀಗಾಗಿ ಇದು ಹೆಚ್ಚು ಮಹತ್ವದ ಶಕ್ತಿ ಪೀಠ ಮತ್ತು ಜಗತ್ತಿನ ಎಲ್ಲ ನಾಡಿಗಳೂ ಸೇರುವ ನಾಭಿಕೇಂದ್ರ.

ಮೊದಲಿಗೆ ಕಾಂಚೀಪುರಂನಲ್ಲಿ ನೆಲೆಸಿ ಭಕ್ತರ ಸಂಕಷ್ಟಗಳನ್ನು ಪರಿಹರಿಸುತ್ತಿರುವ ವಿಕಟಚಕ್ರ ವಿನಾಯಕನಿಗೆ ವಂದನೆ.

ಸ್ವಕಟಜಾತ ಮದಾಶ್ರಿತಬಂಭರ ಪ್ರಕಟಕೂಜಿತನಾದಿತದಿಕ್ತಟಮ್ ।
ನಿಕಟವಾಸಿನಮೇಕರ ಸಾಲಿನೋ ವಿಕಟಚಕ್ರ ವಿನಾಯಕಮಾಶ್ರಯೇ ॥
ಮಾತಾಮಹಮಹಾಶ್ಶೈಲಂ ಮಹಸ್ತದ ಪಿತಾಮಹಮ್ ।
ಕಾರಣಂ ಜಗತಾಂ ವಂದೇ ಕಂಠಾದುಪರಿ ವಾರಣಮ್ ॥
ಶ್ರೀಸ್ವಯಂ ಸರ್ವತೀರ್ಥಾತ್ಮಿಕೇ ಸರ್ವ ಮಂತ್ರಾತ್ಮಿಕೇ ಸರ್ವ ತತ್ತ್ವಾತ್ಮಿಕೇ
ಸರ್ವ ಮುದ್ರಾತ್ಮಿಕೇ ಸರ್ವ ಪೀಠಾತ್ಮಿಕೇ ಸರ್ವ ಶಕ್ತ್ಯಾತ್ಮಿಕೇ
ಸರ್ವ ಚಕ್ರಾತ್ಮಿಕೇ ಸರ್ವ ವರ್ಣಾತ್ಮಿಕೇ ಸರ್ವ ವಿದ್ಯಾತ್ಮಿಕೇ
ಸರ್ವ ಯೋಗಾತ್ಮಿಕೇ ಸರ್ವ ಮುದ್ರಾತ್ಮಿಕೇ ಸರ್ವ ನಾದಾತ್ಮಿಕೇ

ಸರ್ವ ಸರ್ವಾತ್ಮಕೇ ಸರ್ವಣೀ ಹೇ ಜಗನ್ಮಾತೃಕೇ

ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ.

ಕಾಮಾಕ್ಷೀ ಸಗುಣಾ ಲಿಂಗರೂಪಾ ಚ ನಿರ್ಗುಣಾ ಚ ರಸಾಲಕೇ ।

ಶಿವನ ಬೀಜದಿಂದ ಮೂಲವನ್ನೂ, ವೇದಗಳನ್ನು ಶಾಖೆಗಳಾಗಿ ಹೊಂದಿರುವ ಕಾಮೇಶ್ವರನ ರೂಪವಾಗಿ ಮಾರ್ಕಂಡೇಯನಿಗೆ ನೆಲೆಯಾಗಿದ್ದ ಮಾವಿನ ಮರದ ರೂಪದಲ್ಲಿ ಮತ್ತು ಏಕಾಮ್ರೇಶ್ವರ ಪೃಥ್ವೀಲಿಂಗದ ರೂಪದಲ್ಲಿರುವ ಕಾಮಾಕ್ಷಿಗೆ ಪ್ರಣತಿ.

ಶಿವಬೀಜನಮುದ್ಭೂತಂ ವೇದಶಾಖಾಭಿರುಜ್ಜ್ವಲಮ್ ।

ಮೃಕಂಡುತನಯಾಧಾರಂ ರಸಾಲಂ ತಂ ನಮಾಮ್ಯಹಂ ॥

ಐಶ್ವರ್ಯಂ ಪರಮಂ ತತ್ತ್ವಮಾದಿಮಧ್ಯಾಂತವರ್ಜಿತಮ್ ।

ಆಧಾರಂ ಸರ್ವಲೋಕಾನಾಮನಾಧಾರಮವಿಕ್ರಿಯಮ್ ॥

ಅನಂತಾನಂತಬೋಧಾಂಬುನಿಧಿಮದ್ಭುತವಿಕ್ರಮಮ್ ।

ಅಂಬಿಕಾಪತಿಮೀಶಾನಮನಿಶಂ ಪ್ರಣಮಾಮ್ಯಹಮ್ ॥

ಸುಪ್ರಸನ್ನಂ ಮಹಾದೇವ್ಯಾ ನಿತ್ಯಕಲ್ಯಾಣ ಸುಂದರಮ್ ।

ಮಹಾಪ್ರಳಯ ಪಾಪಘ್ನಂ ರಸಾಲೇಶಮಹಂ ಭಜೇ ॥

ಉಮಾಲಿಂಗನಸಂಕ್ರಾಂತ ಕುಚಕಂಕಣಮುದ್ರಿತಮ್ ।

ಲಿಂಗಮೇಕಾಮ್ರನಾಥಸ್ಯ ಸೈಕತಂ ಸಮುಪಾಸ್ಮಹೇ ॥

ಹರಿಕ್ಷೇತ್ರದ ಪುಣ್ಯಕೋಟಿ ವಿಮಾನದಲ್ಲಿ ಸರ್ವಾಭೀಷ್ಟ ಪ್ರದಾಯಕ, ಮುಕ್ತಿದಾಯಕನಾದ ಶಂಖ ಚಕ್ರ ಗದಾ ಪದ್ಮಧಾರಿ ವರದರಾಜನ ರೂಪದಲ್ಲಿ ನೆಲೆಸಿರುವ ಪುಂರೂಪದ ನಾರಾಯಣಿ, ಕಾಮಾಕ್ಷಿಗೆ ನಮನ.

ಪುಣ್ಯಕೋಟಿ ವಿಮಾನಾಂಕಂ ತತ್ತ್ವಸೋಪಾನ ಭೂಷಿತಮ್ ।

ನಾರಸಿಂಹಾಧಿಷ್ಠಿತಗೃಹಂ ಹಸ್ತಿಶೈಲಂ ನಮಾಮ್ಯಹಂ ॥

ತಸ್ಮಾದಭೀಷ್ಟವರದಸ್ಸಾಕ್ಷಾತ್ ಮುಕ್ತಿ ಪ್ರದಾಯಕಃ ।

ವರ್ತತೇ ತದ್ಧರಿಕ್ಷೇತ್ರೇ ಪುಣ್ಯಕೋಟಿ ವಿಮಾನಕೇ ॥

ಮಾವಿನ ಮರದ ರೂಪದಲ್ಲಿ, ಏಕಾಮ್ರೇಶ್ವರನ ರೂಪದಲ್ಲಿ, ಅಶ್ವಮೇಧ ಯಜ್ಞದ ಯಾಗಾಗ್ನಿಯಿಂದ ದಿವ್ಯ ವೈಭವದಿಂದ ಹೊರಹೊಮ್ಮಿದ ವರದರಾಜನ ರೂಪದಲ್ಲಿ ವ್ಯಕ್ತಗೊಂಡ, ಹರಿಹರಾತ್ಮಿಕವಾಗಿರುವ ಕಾಮಾಕ್ಷಿಯ ವಿಲಾಸ ಈಗ ದೇಗುಲದಲ್ಲಿ.

ನವಾವರಣಗಳಿಂದ, ನವರತ್ನಮಣಿಗಳ ದಿವ್ಯಕಾಂತಿಯಿಂದ, ನವವಿಧವಾದ ಪ್ರಾಕಾರ, ಆಕಾರಗಳಿಂದ ನಿರ್ಮಿತವಾದ ಶ್ರೀಪುರ ಕಾಮಾಕ್ಷಿಯ ದೇಗುಲ. ಶ್ರೀಮಾತೆಯ ಅಂಗನ್ಯಾಸ ದೇವತೆಗಳು, ತಿಥಿನಿತ್ಯಾ ದೇವತೆಗಳು, ಗುರುಪರಂಪರೆ, ಅಣಿಮಾದಿ ಸಿದ್ಧಿ ದೇವತೆಗಳು, ಅಷ್ಟಮಾತೃಕೆಯರು, ಮುದ್ರಾ ದೇವತೆಯರು, ಶಕ್ತಿ ದೇವತೆಯರು, ಚತುಷ್ಷಷ್ಟಿಕೋಟಿ ಯೋಗಿನೀ ಗಣಗಳು ನೆಲೆಸಿರುವ ದಿವ್ಯ ತಾಣ.

ನಾಲ್ಕು ಗೋಪುರಗಳ ಭವ್ಯ ದೇಗುಲ. ಮೊದಲನೆಯ ಪ್ರಾಕಾರದಲ್ಲಿ ಪಂಚತೀರ್ಥ, ಶತಸ್ತಂಭ ಮಂಟಪ, ಧ್ವಜಾರೋಹಣ ಮಂಟಪ. ದೇಗುಲದ ಮುಖ್ಯದ್ವಾರದ ಇಕ್ಕೆಡೆಯಲ್ಲಿ ಭಯನಾಶಕರಾದ ಸಂರಕ್ಷಕರಾದ ಕಾಲಭೈರವ ಮತ್ತು ಮಹಿಷಾಸುರ ಮರ್ದಿನಿ. ವಿಜಯ ಸ್ತಂಭ, ವಿಘ್ನನಿವಾರಕ, ಧರ್ಮಶಾಸ್ತಾ, ರಾಜಮಾತಂಗಿ, ಅನ್ನಪೂರ್ಣೆ, ಶ್ರೀಶಂಕರ ಭಗವತ್ಪಾದರು ವಿರಾಜಮಾನರಾಗಿರುವ ಬಹಿಃ ಪ್ರಾಕಾರ. ಕಲ್ವರ್ ಪೆರುಮಾಳ್, ರೂಪಲಕ್ಷ್ಮಿ, ಅರ್ಧನಾರೀಶ್ವರ, ಸಂತಾನ ಸ್ತಂಭ, ಅರೂಪಲಕ್ಷ್ಮಿ, ವಾರಾಹೀ, ಗಣೇಶ ಶ್ರೀಮಾತೆಯ ಅಂತರಾಲಯದ ಸುತ್ತಲೂ ಇರುವ ಪ್ರಾಕಾರದಲ್ಲಿರುವ ವಿಶಿಷ್ಠ ದೇವಾಲಯ.

ಜಿತೇಂದ್ರಿಯನೂ, ತ್ರಿಪುರಾಂತಕನೂ, ಮನ್ಮಥನನ್ನು ಜಯಿಸಿದವನೂ ಆದ ಈಶ್ವರನೂ ಸಹ ಅನುಪಮ ಸುಂದರಿಯಾದ ವಿಷ್ಣುರೂಪಿ ಮೋಹಿನಿಯನ್ನು ನೋಡಿ, ಪರವಶನಾಗುವಂತೆ ಮಾಡಿ, ಆ ಹರಿಹರ ಸಂಬಂಧದಿಂದ "ಮಣಿಕಂಠ" ನ ಜನನಕ್ಕೆ ಕಾರಣವಾದುದೂ ದೇವಿಯ ಅನುಗ್ರಹವೇ.

ಲೋಕವೀರಂ ಮಹಾಪೂಜ್ಯಂ ಸರ್ವರಕ್ಷಾಕರಂ ವಿಭುಂ ।
ಪಾರ್ವತೀ ಹೃದಯಾನಂದಂ ಶಾಸ್ತಾರಂ ಪ್ರಣಮಾಮ್ಯಹಮ್ ॥

ಅಯ್ಯಪ್ಪ ಸ್ವಾಮಿಯು ಪೂರ್ಣ ಮತ್ತು ಪುಷ್ಕಲೆಯರೊಡನೆ ಅಪರೂಪದ ಭಂಗಿಯಲ್ಲಿ ಕ್ಷೇತ್ರಪಾಲಕನಾಗಿರುವ ದೇಗುಲ ಕಾಮಾಕ್ಷಿ ದೇವಾಲಯ.

ಧ್ಯಾನಮೂಲಂ ಗುರುಮೂರ್ತಿಃ ಪೂಜಾಮೂಲಂ ಗುರುರ್ಪಾದಃ ।
ಪವಿತ್ರಮೂಲಂ ಗುರುರ್ವಾಕ್ಯಂ ಮೋಕ್ಷಮಾರ್ಗಂ ಗುರುಕೃಪಾ ॥

ದೇವಸ್ಥಾನದ ರಾಜಗೋಪುರದ ಪ್ರವೇಶದಲ್ಲಿ ಶ್ರೀಮಾತೆಯ ಉಪಾಸಕರಾದ ಅಗಸ್ತ್ಯ ಮಹಾಮುನಿಗಳು ಮತ್ತು ಹಯಗ್ರೀವ ಸ್ವಾಮಿಯ ಸನ್ನಿಧಿ. ಕಲ್ಪವೃಕ್ಷದ ಕೊಂಬೆಗಳೆಲ್ಲಾ ಲೇಖನಿಯಾಗಿ, ಸಪ್ತ

ಮಹಾಸಮುದ್ರಗಳೂ ಶಾಯಿಯ ಪಾತ್ರೆಗಳಾಗಿ, ಐವತ್ತುಕೋಟಿ ವಿಸ್ತೀರ್ಣದ ಭೂಮಿಯು ಬರೆಯುವ ಆಧಾರ ಪತ್ರವಾಗಿ, ಗುಣಗಳನ್ನು ಬರೆಯಬೇಕಾದ ಅವಧಿಯು ಎಷ್ಟೇ ಕಾಲವಾದರೂ, ಎಲ್ಲ ಲೋಕದ ಕೋಟಿ ಬಾಹುಗಳೂ ಬರೆದರೂ, ಬರವಣಿಗೆಯನ್ನು ಹೇಳುವವರು ಬೃಹಸ್ಪತಿಗೆ ಸಮಾನರಾದರೂ, ದೇವಿಯ ಚರಣಕಮಲದ ಒಂದು ಬೆರಳಿನ ಕಾಂತಿಯ ಸಾವಿರ ಪಾಲಿನಲ್ಲಿ ಒಂದಂಶದ ವರ್ಣನೆಯು ಕೂಡ ಆಗುವುದಿಲ್ಲವೆಂದು ಹಯಗ್ರೀವ ಸ್ವಾಮಿ ಅಗಸ್ತ್ಯರೊಂದಿಗೆ ಶ್ರೀವಿದ್ಯೆಯ ಚಿಂತನೆ ಮಾಡಿದ ಪವಿತ್ರ ತಾಣ.

ಅಕ್ಷಸ್ರಕ್ಪರಶೂಗದೇಷುಕುಲಿಶಂ ಪದ್ಮಂ ಧನುಃ ಕುಂಡಿಕಾಂ
ದಂಡಂ ಶಕ್ತಿಮಸಿಂ ಚ ಚರ್ಮ ಜಲಜಂ ಘಂಟಾಂ ಸುರಾಭಾಜನಮ್ ।
ಶೂಲಂ ಪಾಶಸುದರ್ಶನೇ ಚ ದಧತೀಂ ಹಸ್ತೈಃ ಪ್ರವಾಲಪ್ರಭಾಂ ॥

ಜಪಮಾಲೆ, ಪರಶು, ಗದೆ, ಬಾಣ, ಸಿಡಿಲು, ಪದ್ಮ, ಧನಸ್ಸು, ಮಡಕೆ, ದಂಡ, ಶಕ್ತಿ, ಕತ್ತಿ, ಗುರಾಣಿ, ಶಂಖ, ಗಂಟೆ, ಸುರಾಪಾತ್ರೆ, ಶೂಲ, ಪಾಶ, ಸುದರ್ಶನ ಚಕ್ರ ಧರಿಸಿ, ದುರ್ಗೆಯ ರೂಪದಲ್ಲಿ ಶ್ರೀಮಾತೆ ಬಂಧಕಾಸುರನ ಮೇಲೆ ಸಾಧಿಸಿದ ವಿಜಯದ ಸಂಕೇತವಾಗಿರುವ ಜಯಸ್ತಂಭ.

ಜಯ ಜಯ ಜಗದಂಬ ಶಿವೇ ಜಯ ಜಯ ಕಾಮಾಕ್ಷೀ ಜಯ ಜಯಾದ್ರಿಸುತೇ ।
ಜಯ ಜಯ ಮಹೇಶದಯಿತೇ ಜಯ ಜಯ ಚಿದ್ಗಗನ ಕೌಮುದಿಧಾರೇ ॥

ಸರ್ವಸಿದ್ಧಿಪ್ರದ ಅಷ್ಟಮಾವರಣದ ಶಕ್ತಿದೇವತೆ ಅಂಕುಶಿನಿಯು ನಮ್ಮ ಆಧ್ಯಾತ್ಮಿಕ, ಆದಿಭೌತಿಕ, ಆದಿದೈವಿಕವೆಂಬ ತ್ರಿತಾಪಗಳನ್ನು ಪರಿಹರಿಸಲು ನೆಲೆಸಿರುವ ಜಯಸ್ತಂಭದ ಆವರಣ. ಉಗ್ರಸ್ವರೂಪಿಣಿಯಾದ ಕಾಮಾಕ್ಷಿಯ ತಾಮಸಿಕ ಶಕ್ತಿಯನ್ನು ಶಾಂತಗೊಳಿಸಲು, ತಾನು ಚಿತ್ರಿಸಿದ ಸೌಮ್ಯ ಬೀಜಾಕ್ಷರಗಳನ್ನೊಳಗೊಂಡ ಶ್ರೀಚಕ್ರ ರೇಖಾಮಾತ್ರವಾಗಿ ಮಾರ್ಪಟ್ಟು, ಭೂಮಿಯೊಳಗೆ ಹೋಗಿ ಪ್ರತಿಷ್ಠೆಯಾಗುವಂತೆ ಮಾಡಿದ ಶ್ರೀಶಂಕರ ಭಗವತ್ಪಾದರ ಸಾಧನೆಯನ್ನು ಕೃತಜ್ಞತೆಯಿಂದ ನೆನಪಿಸುವ ಶ್ರೀಶಂಕರರ ದೇಗುಲ.

ನಿತ್ಯಾನಂದಕರೀ, ವರಾಭಯಕರೀ, ಸೌಂದರ್ಯರತ್ನಾಕರೀ, ಬ್ರಹ್ಮಾಂಡ ಭಾಂಡೋದರೀ, ಕಾಶೀಪುರಾಧೀಶ್ವರೀ ; ಒಂದು ಕೈಯ್ಯಲ್ಲಿ ಅನ್ನದ ಬಟ್ಟಲು, ಮತ್ತೊಂದು ಕೈಯ್ಯಲ್ಲಿ ಸೌಟು ಹಿಡಿದು ನಮಗೆ ಪರಮಾನಂದದಾಯಕವಾದ ಅನ್ನದಾನ ಮಾಡುವುದರಲ್ಲಿ ಮಗ್ನಳಾಗಿ ಕಟಾಕ್ಷ ವೀಕ್ಷಣೆ ಬೀರುತ್ತಿರುವ ಅನ್ನಪೂರ್ಣೆ ಪ್ರಾಕಾರದ ಹೊಸಿಲಿನಲ್ಲಿ.

ಜ್ಞಾನ ವೈರಾಗ್ಯ ಸಿದ್ಧಿಯನ್ನು ಭಿಕ್ಷೆಯಾಗಿ ನೀಡಿದ ಶ್ರೀಮಾತೆಯ ಗರ್ಭಗುಡಿ, ಗಾಯತ್ರೀ ಮಂಟಪದ ಮಹಾಬಿಲಂ. ಇಂದ್ರಿಯಾತೀತ ಸೂಕ್ಷ್ಮಬಿಲ. ತಾಯಿಯ ಗರ್ಭದಲ್ಲಿರುವ ಮಗು ಹೊಕ್ಕಳ

ಬಳ್ಳಿಯ ಮೂಲಕ ಪೋಷಣೆ ಪಡೆಯುವಂತೆ ಬ್ರಹ್ಮಾಂಡದ ಸಮಸ್ತ ಸೃಷ್ಟಿಯೂ ಪರಾಶಕ್ತಿಯಿಂದ ಪೋಷಣೆ ಪಡೆಯುವ ಬಿಲಾಕಾಶ ಮಾಹಾಬಿಲಂ. ಮಹಾಬಿಲದ ಮೇಲೆ ಇರುವ ಗಾಯತ್ರೀ ಮಂಟಪಂ. ಗಾಯತ್ರೀ ಮಂತ್ರದ 24 ಬೀಜಾಕ್ಷರಗಳೂ ಸ್ತಂಭಗಳಾಗಿ, ನಾಲ್ಕು ವೇದಗಳೂ ಗೋಡೆಗಳಾಗಿರುವ ಗಾಯತ್ರೀ ಮಂಟಪಂ. ಪ್ರಕಟ ಯೋಗಿನೀ, ಗುಪ್ತಯೋಗಿನೀ, ಗುಪ್ತತರ ಯೋಗಿನೀ, ಸಂಪ್ರದಾಯ ಯೋಗಿನೀ, ಕುಲೋತ್ತೀರ್ಣ ಯೋಗಿನೀ, ನಿಗರ್ಭ ಯೋಗಿನೀ, ರಹಸ್ಯ ಯೋಗಿನೀ, ಅತಿರಹಸ್ಯ ಯೋಗಿನೀ, ಪರಾಪರ ರಹಸ್ಯ ಯೋಗಿನಿಯರ ಕೇಂದ್ರವಾಗಿರುವ ಮಹಾಬಿಲಂ.

ಗಾಯತ್ರೀಮಂಟಪಾಧಾರಂ ನಾಭಿಸ್ಥಾನಂ ಭುವಂ ಪರಮ್ ।
ಪುರುಷಾರ್ಥಪ್ರದಂ ಶಂಭೋರ್ಬಿಲಪ್ರಾಂತಂ ನಮಾಮ್ಯಹಂ ।
ಬಿಲ ಪ್ರದಕ್ಷಿಣಂ ನೃಣಾಂ ಮೋಕ್ಷಸಾಮ್ರಾಜ್ಯಪ್ರದಾಯಕಮ್ ॥

ನಾದಬಿಂದು ಸಂಯುತ ಪರಮಂ ವ್ಯೋಮಂ, ಆಕಾಶಂ ಶರೀರಂ ಬ್ರಹ್ಮನ್, ಶಂಭು ಶರೀರಂ, ಪ್ರತ್ಯಕ್ಷಂ ಮೋಕ್ಷದಂ ಪರಂ, ಜಗತ್ಕಾಮ ಕಲಾಕಾರಂ, ಕುಂಡಲಿನೀ ಪದಂ, ಆದಿ ಭೌತಿಕ ಮರ್ಮಾಂಗಂ, ಕಾಮನಗರಂ, ದಿವ್ಯಂ, ಅಪುಮ್ನಂ, ಸರ್ವಸಿದ್ಧಿದಂ, ತಪಸ್ಥಾನಂ, ನವದ್ವಾರಸ್ಯ ಮಾರ್ಗಂ, ಭೂಯೋನಿಂ ಎಂದೆಲ್ಲಾ ಸ್ತುತಿಸಲ್ಪಡುವ ಸೂಕ್ಷ್ಮಬಿಲಂ.

ಚಿತಿರೂಪೇಣ ಯಾ ಕೃತ್ಸ್ನಮೇತದ್ ವ್ಯಾಪ್ಯ ಸ್ಥಿತಾ ಜಗತ್ ।
ಭೂತೇಷು ಸತತಂ ತಸ್ಮೈ ವ್ಯಾಪ್ತಿ ದೇವ್ಯೈ ನಮೋ ನಮಃ ॥

ಮಹಾಬಿಲವೆಲ್ಲಾ ವ್ಯಾಪಿಸಿರುವ ತ್ರಿಪುರೇ, ತ್ರಿಪುರೇಶಿ, ತ್ರಿಪುರಸುಂದರಿ, ತ್ರಿಪುರವಾಸಿನಿ, ತ್ರಿಪುರಾಶ್ರೀ, ತ್ರಿಪುರಮಾಲಿನಿ, ತ್ರಿಪುರಾಸಿದ್ಧೇ, ತ್ರಿಪುರಾಂಬಾ, ಮಹಾತ್ರಿಪುರಸುಂದರೀ.

ಬಿಂದು ತ್ರಿಕೋಣ, ವಸುಕೋಣ, ದಶಾರಯುಗ್ಮ, ಮನ್ವಸ್ರ, ನಾಗದಳ ಷೋಡಶ ಪತ್ರಯುಕ್ತಂ, ವೃತ್ತತ್ರಯಂಚ ಧರಣೀ ಸದನತ್ರಯಂಚ ಶ್ರೀಚಕ್ರರಾಜ ಉದಿತ ಪರದೇವತಾಯಃ ಶ್ರೀಶಂಕರ ಭಗವತ್ಪಾದರ ಲಿಖಿತ ಶ್ರೀಚಕ್ರ.

ಮಹಾತಂತ್ರಾ, ಮಹಾಮಂತ್ರಾ, ಮಹಾಯಂತ್ರಾ, ಮಹಾನನಾ ;

ದೇವಿಯ ಮಂತ್ರ, ಯಂತ್ರ, ತಂತ್ರ ಸ್ವರೂಪ. ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಶರೀರಗಳಿಗಿಂತಲೂ ಭಿನ್ನವಾದ ಪರಮಾನಂದ ಶಕ್ತಿಯ ಸುಖಸ್ವರೂಪವಾದ, ಆಹ್ಲಾದದಾಯಕವಾದ, ತ್ರಿಮೂರ್ತಿಗಳಿಂದಲೂ, ದೇವಾಧಿದೇವತೆಗಳಿಂದಲೂ ಪೂಜಿಸಲ್ಪಟ್ಟ ರಹಸ್ಯಯೋಗಿನೀ ಶಕ್ತಿಯಾದ; ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ವಾಗ್ದೇವತಾ ಸ್ವರೂಪರಾದ ವಶಿನೀ, ಕಾಮೇಶ್ವರೀ, ಮೋದಿನೀ,

ವಿಮಲೆ, ಅರುಣ, ಜಯಿನಿ, ಸರ್ವೇಶ್ವರಿ, ಕೌಳಿನಿ ಎಂಬ ದಿವ್ಯ ಶಕ್ತಿಗಳಿಂದ ಆವರಿಸಲ್ಪಟ್ಟ, ಸ್ಥಾವರ ಜಂಗಮ ರೂಪವಾದ ಪ್ರಪಂಚವನ್ನು ಪೀಡಿಸುವ ಸಂಸಾರವೆಂಬ ರೋಗವನ್ನು ಪರಿಹರಿಸುವ, ಚಕ್ರರಾಜ ಶ್ರೀಚಕ್ರ. ಕೋಟಿಸೂರ್ಯ ಪ್ರಭೆಗಳಗೂಡಿ ಪ್ರತಿಷ್ಠಾಪನೆಗೊಂಡ ಶ್ರೀಚಕ್ರ ಸಕಲ ಚರಾಚರ ಜಗತ್ತಿಗೂ, ಸೃಷ್ಟಿ ಸ್ಥಿತಿ ಲಯಗಳಿಗೂ ಸಂಕೇತ, ಶ್ರೀಮಾತೆಯ ಪ್ರತಿಬಿಂಬ.

ಮಧ್ಯೇ ತ್ರಿಕೋಣನಿಲಯಂ ಪರಮಾಮೃತಾರ್ದ್ರಮ್
ಹ್ರೀಂಕಾರಮೇವ ತವನಾಮ ತದೇವ ರೂಪಂ ।
ತ್ವನ್ನಾಮ ದುರ್ಲಭಮಿವ ತ್ರಿಪುರೇ ಗೃಣಂತಿ
ತ್ವತ್ತೇಜಸಾ ಪರಿಣತಂ ವಿಯದಾದಿಭೂತಂ ।
ಸೌಖ್ಯಂ ತನೋತಿ ಸರಸೀರುಹ ಸಂಭವಾದೇ
ಹ್ರೀಂಕಾರತ್ರಯ ಸಂಪುಟೇನ ಮಹತಾ ಮಂತ್ರೇಣ ಸಂದೀಪಿತಂ ॥
ಉತ್ಪಾತ ಮೇಘಾಸ್ಸೋಲ್ಕಾ ಯೇ ಪ್ರಾಗಾಸಂಸ್ತೇ ಶಮಂಯಯುಃ ।
ಸರಿತೋ ಮಾರ್ಗವಾಹಿನ್ಯಸ್ತಥಾ ಸಂಸ್ತತ್ರ ಪಾತಿತೇ ॥
ತತೋ ದೇವಗಣಾಃ ಸರ್ವೇ ಹರ್ಷನಿರ್ಭರ ಮಾನಸಾಃ ।
ಬಭೂವಿರ್ನಿಹತೇ ತಸ್ಮಿನ್ ಗಂಧರ್ವಾ ಲಲಿತಂ ಜಗುಃ ।
ಅವಾದಯಂಸ್ತಥೈವಾನ್ಯೇ ನನೃತುಶ್ಚಾಪ್ಸರೋಗಣಾಃ ।
ವವುಃ ಪುಣ್ಯಾಸ್ತಥಾ ವಾತಾಃ ಸುಪ್ರಭೋಭೂದ್ದಿವಾಕರಃ ।
ಜಜ್ವಲುಶ್ಚಾಗ್ನಯಶ್ಶಾಂತಾಶ್ಶಾಂತಾ ದಿಗ್ಜನಿತಸ್ವನಾಃ ।

ಬಂಧಕಾಸುರ ಮತ್ತು ಅವನ ಅಸುರ ಸೇನೆಯ ವಧೆಯ ನಂತರ ವಿಪತ್ಸೂಚ ಧ್ವನಿಗಳೆಲ್ಲಾ ಅಡಗಿ, ಪ್ರಶಾಂತವಾದ ಪುಣ್ಯಪ್ರದವಾದ ಸಮಯದಲ್ಲಿ ಆನಂದಪೂರ್ಣ ಮನಸ್ಕರಾದ ದೇವತೆಗಳ ಪ್ರಾರ್ಥನೆಯ ಮೇರೆಗೆ ಉದ್ಭವವಾದ ಕಾಮಾಕ್ಷಿ.

ಒಂದೊಂದೇ ಪ್ರಾಕಾರಗಳನ್ನು, ದ್ವಾರಗಳನ್ನು ದಾಟಿದಂತೆಲ್ಲ, ಷಟ್ ಚಕ್ರಗಳನ್ನು ಭೇದಿಸಿ ಆರೋಹಿಸಿ ಸಹಸ್ರಾರದಲ್ಲಿನ ದಿವ್ಯವಾದ ಆನಂದವನ್ನು ಪಡೆದ ಅನುಭವ :-

**“ಎದುರಿಗಿದ್ದ ದಿವ್ಯಮಂಗಳವಾದ ವಿಗ್ರಹದ ದರ್ಶನದಿಂದ”**

ಕಿಂ ವರ್ಣಯಾಮ ತವರೂಪ ಮಚಿಂತ್ಯಮೇತತ್
ಕಿಂಚಾತಿವೀರ್ಯಮಸುರಕ್ಷಯಕಾರಿ ಭೂರಿ ।

ಕಿಂ ಚಾಹವೇಷು ಚರಿತಾನಿ ತವಾತಿ ಯಾನಿ

ಸರ್ವೇಷು ದೇವ್ಯಸುರದೇವಗಣಾದಿಕೇಷು ॥

ಹೇತುಃ ಸಮಸ್ತಜಗತಾಂ ತ್ರಿಗುಣಾಪಿ ದೋಷೈಃ

ನ ಜ್ಞಾಯಸೇ ಹರಿಹರಾದಿಭಿರವ್ಯಪಾರಾ ।

ಸರ್ವಾಶ್ರಯಾಖಿಲಮಿದಂ ಜಗದಂಶಭೂತಂ

ಅವ್ಯಾಕೃತಾ ಹಿ ಪರಮಾ ಪ್ರಕೃತಿಸ್ತ್ವಮಾದ್ಯಾ ॥

ಯಾ ಮುಕ್ತಿಹೇತುರವಿಚಿಂತ್ಯ ಮಹಾವ್ರತಾ ತ್ವಂ

ಅಭ್ಯಸ್ಯಸೇ ಸುನಿಯತೇಂದ್ರಿಯತತ್ವಸಾರೈಃ ।

ಮೋಕ್ಷಾರ್ಥಿಭಿರ್ಮುನಿಭಿರಸ್ತಸಮಸ್ತದೋಷೈ

ರ್ವಿದ್ಯಾಽಸಿ ಸಾ ಭಗವತೀ ಪರಮಾ ಹಿ ದೇವಿ ॥

ಉದಯಿಸುತ್ತಿರುವ ಸಹಸ್ರಾರು ಕೋಟಿ ಸೂರ್ಯರ ಸದೃಶವಾದ ತೇಜೋಮಯಿ, ಶಾಂತಿ ಮತ್ತು ಸಮೃದ್ಧಿಯನ್ನು ಸೂಚಿಸುವ ಪದ್ಮಾಸನ ಭಂಗಿಯಲ್ಲಿ, ಕಲ್ಪವೃಕ್ಷದಂತಹಾ ಕೈಗಳಲ್ಲಿ ಪಾಶ, ಅಂಕುಶ, ಕಬ್ಬಿನ ಬಿಲ್ಲು ಮತ್ತು ಪಂಚಪುಷ್ಪಬಾಣಗಳನ್ನು ಹಿಡಿದು, "ಹ್ರೀಂ" ಎಂಬ ಬೀಜಮಂತ್ರದಿಂದ ಶೋಭಿತಳಾಗಿ ಶ್ರೀಚಕ್ರ ಕೇಂದ್ರಬಿಂದುವಿನಲ್ಲಿರುವ ಜಗನ್ಮೋಹಿನಿ, ಮಹಾತ್ರಿಪುರಸುಂದರಿ, ಕಾಮಾಕ್ಷಿ, ಪ್ರಣವ ಪೀಠದಲ್ಲಿ.

ಉದ್ಯದ್ಭಾನು ಸಹಸ್ರಾಭಾ ಚತುರ್ಬಾಹು ಸಮನ್ವಿತಾ ।

ರಾಗಸ್ವರೂಪ ಪಾಶಾಢ್ಯಾ ಕ್ರೋಧಾಕಾರಾಂಕುಶೋಜ್ವಲಾ ।

ಮನೋರೂಪೇಕ್ಷು ಕೋದಂಡಾ ಪಂಚತನ್ಮಾತ್ರ ಸಾಯಕಾ ।

ಪದ್ಮರಾಗ, ವಜ್ರ ಮಾಣಿಕ್ಯಗಳಿಂದ ಥಳಥಳಿಸುವ ಸುಂದರ ಕಿರೀಟದಲ್ಲಿ ಬಾಲಶಶಿ;

॥ ಓಂ ಐಂ ಹ್ರೀಂ ಕ್ಲೀಂ ವಜ್ರಮಾಣಿಕ್ಯಕಟಕ ಕಿರೀಟಾಯೈ ನಮೋ ನಮಃ ॥

ಭಸ್ಮಲೇಖಾಲಂಕೃತವಾದ ಅಷ್ಟಮೀ ಚಂದ್ರನೋಪಾದಿಯಲ್ಲಿ ಪ್ರಕಾಶಮಾನವಾದ ಹಣೆಯಲ್ಲಿ ಚಂದ್ರನ ಮಧ್ಯದಲ್ಲಿ ಚಿಹ್ನೆಯಂತಿರುವ ಸೌಭಾಗ್ಯದಾಯಕವಾದ ತಿಲಕ.

॥ ಓಂ ಐಂ ಹ್ರೀಂ ಕ್ಲೀಂ ಭಸ್ಮರೇಖಾಂಕಿತಲಸನ್ಮಸ್ತಕಾಯೈ ನಮೋ ನಮಃ ॥

ಸೃಷ್ಟಿ-ಕ, ಸ್ಥಿತಿ-ಅ, ಲಯ-ಮ. ಕಾಮಾಕ್ಷಿ. ಬ್ರಹ್ಮ, ವಿಷ್ಣು, ರುದ್ರ ಶಕ್ತಿಯಿಂದ ಕೂಡಿದ ಸಂಪೂರ್ಣವಾಗಿ ವಿಕಸಿಸುತ್ತಿರುವ ಚಂಪಾ ಪುಷ್ಪಗಳಂತಹ ತ್ರಿನೇತ್ರಗಳೊಂದಿಗೆ ಕಟಾಕ್ಷ ವೀಕ್ಷಣೆ.

॥ ಓಂ ಐಂ ಹ್ರೀಂ ಕ್ಲೀಂ ವಿಕಚಾಂಭೋರುಹದಳಲೋಚನಾಯೈ ನಮೋ ನಮಃ ॥

॥ ಓಂ ಐಂ ಹ್ರೀಂ ಕ್ಲೀಂ ಭಕ್ತರಕ್ಷಣದಾಕ್ಷಿಣ್ಯಕಟಾಕ್ಷಾಯೈ ನಮೋ ನಮಃ ॥

ಈಗ ತಾನೇ ಅರಳುತ್ತಿರುವ ಚಂಪಕಾ ಪುಷ್ಪ ಸದೃಶವಾದ ನಾಸಿಕ. ಅದರಲ್ಲಿ ಸ್ವಾತಿ ನಕ್ಷತ್ರದಂತೆ ಥಳಥಳ ಹೊಳೆಯುತ್ತಿರುವ ಮೂಗುತಿ.

॥ ಓಂ ಐಂ ಹ್ರೀಂ ಕ್ಲೀಂ ಶರಚ್ಚಾಂಪೇಯಪುಷ್ಪಾಭನಾಸಿಕಾಯೈ ನಮೋ ನಮಃ ॥

ಸೂರ್ಯ ಚಂದ್ರ ಮಂಡಲಗಳೇ ಕರ್ಣಾಭರಣವಾಗಿವೆಯೇನೋ ಎಂಬಂತೆ ಪ್ರಕಾಶಮಾನವಾಗಿ, ಕಪೋಲಗಳನ್ನು ಮೃದುವಾಗಿ ಸ್ಪರ್ಶಿಸುತ್ತಿರುವ ಕರ್ಣಾಭರಣಗಳು.

॥ ಓಂ ಐಂ ಹ್ರೀಂ ಕ್ಲೀಂ ತಾಟಂಕಯುಗಲೀಭೂತತಪನೋಡುಪ ಮಂಡಲಾಯೈ
ನಮೋ ನಮಃ ॥

ಅರಿಶಿನದಿಂದ ಲೇಪಿತವಾಗಿ ಕನ್ನಡಿಯಂತೆ ಹೊಳೆಯುತ್ತಿರುವ ಕಪೋಲಗಳು.

॥ ಓಂ ಐಂ ಹ್ರೀಂ ಕ್ಲೀಂ ಪದ್ಮರಾಗಶಿಲಾದರ್ಶ ಪರಿಭಾವಿ ಕಪೋಲಾಯೈ ನಮೋ ನಮಃ ॥

ನಮಗೆ ಆಶೀರ್ವಾದ ನೀಡುತ್ತಿರುವ ಕೆಂಪಗಿರುವ ದೇವಿಯ ಅಧರಗಳು. ತಾಂಬೂಲ ಸೇವನೆಯಿಂದ ಮತ್ತಷ್ಟು ಕೆಂಪಾಗಿ, ಮುಗುಳ್ನಗುತ್ತಿರುವಾಗ ಅಧರಗಳ ಮಧ್ಯೆ ಫಳಕ್ಕನೆ ಹೊಳೆಯುವ ಬೆಳ್ಳಗಿನ ದಂತಗಳ ಸಾಲು.

॥ ಓಂ ಐಂ ಹ್ರೀಂ ಕ್ಲೀಂ ತಾಂಬೂಲಪೂರಿತಸ್ಮೇರವದನಾಯೈ ನಮೋ ನಮಃ ॥

॥ ಓಂ ಐಂ ಹ್ರೀಂ ಕ್ಲೀಂ ಸುಪಕ್ವದಾಡಿಮೀಬೀಜರದನಾಯೈ ನಮೋ ನಮಃ ॥

ಸರ್ವಾಭರಣಗಳಿಂದ ಮತ್ತು ಕಾಮೇಶನಿಂದ ಕಟ್ಟಲ್ಪಟ್ಟ ಮಾಂಗಲ್ಯದಿಂದ ಅಲಂಕೃತವಾದ ಮೃದುವಾದ ಕೊರಳು. ಕತ್ತಿನ ಹಿಂಭಾಗದಿಂದ ದೇವಿಯ ಎರಡೂ ಕಡೆ ಇರುವ ಕದಂಬ ಮಾಲೆ. ಭುಜದ ಮೇಲೆ ಗಿಳಿ.

॥ ಓಂ ಐಂ ಹ್ರೀಂ ಕ್ಲೀಂ ಪದ್ಮಕೈರವ ಮಂದಾರ ಸುಮಾಲಿನ್ಯೈ ನಮೋ ನಮಃ ॥

॥ ಓಂ ಐಂ ಹ್ರೀಂ ಕ್ಲೀಂ ಸ್ಥೂಲಮುಕ್ತಾ ಫಲೋದಾರಸುಹಾರಾಯೈ ನಮೋ ನಮಃ ॥

॥ ಓಂ ಐಂ ಹ್ರೀಂ ಕ್ಲೀಂ ಗಿರೀಶಬದ್ಧಮಾಂಗಲ್ಯಮಂಗಳಾಯೈ ನಮೋ ನಮಃ ॥

॥ ಓಂ ಐಂ ಹ್ರೀಂ ಕ್ಲೀಂ ದಿವ್ಯಭೂಷಣ ಸಂದೋಹ ರಂಜಿತಾಯೈ ನಮೋ ನಮಃ ॥

ಕಡಗ, ಕಂಕಣ, ಬಳೆ, ಉಂಗುರಗಳಿಂದ ಅಲಂಕೃತವಾದ ಕೈಗಳಲ್ಲಿ ಶೋಭಿಸುತ್ತಿರುವ ಪಾಶ, ಅಂಕುಶ, ಕಬ್ಬಿನ ಬಿಲ್ಲು ಮತ್ತು ಪುಷ್ಪಬಾಣಗಳು.

॥ ಓಂ ಐಂ ಹ್ರೀಂ ಕ್ಲೀಂ ರಮಣೀಯಚತುರ್ಬಾಹುಸಂಯುಕ್ತಾಯೈ ನಮೋ ನಮಃ ॥

॥ ಓಂ ಐಂ ಹ್ರೀಂ ಕ್ಲೀಂ ಕನಕಾಂಗದಕೇಯೂರಭೂಷಿತಾಯೈ ನಮೋ ನಮಃ ॥

ಸುವರ್ಣ ಸೀರೆಯ ಮೇಲೆ ಬಿಗಿಯಾಗಿ ಕಟ್ಟಲ್ಪಟ್ಟ ರತ್ನ ವೈಢೂರ್ಯರಂಜಿತವಾದ ಡಾಬು ಮತ್ತು ಪ್ರಣವ ಪೀಠದ ಮೇಲೆ ಜೀರಾಡುತ್ತಿರುವ ಸೀರೆಯ ನೆರಿಗೆಗಳು.

॥ ಓಂ ಐಂ ಹ್ರೀಂ ಕ್ಲೀಂ ಬೃಹತ್ ಸೌವರ್ಣ ಸೌಂದರ್ಯವಸನಾಯೈ ನಮೋ ನಮಃ ॥

ನಮ್ಮ ಧರ್ಮಬದ್ಧವಾದ ಅಭೀಷ್ಟಗಳನ್ನೆಲ್ಲಾ ನೆರವೇರಿಸುವ ಕರುಣಾಮಯ ದೃಷ್ಟಿಯ ಕಿರಣಗಳು. ಸರಸ್ವತಿ, ಲಕ್ಷ್ಮಿಯರು ಬೀಸುತ್ತಿರುವ ಚಾಮರಗಳ ಗಾಳಿಯಿಂದ ಸರಸ್ವತಿ ಲಕ್ಷ್ಮಿ ಕಟಾಕ್ಷ.

॥ ಓಂ ಐಂ ಹ್ರೀಂ ಕ್ಲೀಂ ಸಚಾಮರ ರಮಾವಾಣೀ ವೀಜಿತಾಯೈ ನಮೋ ನಮಃ ॥

ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸುವ ಸುಜ್ಞಾನ ಸೂರ್ಯನ ಉದಯ ದ್ವೀಪ ನಗರಿಯಾದ ದೇವಿಯ ಚರಣಾರವಿಂದಗಳು.

॥ ಓಂ ಐಂ ಹ್ರೀಂ ಕ್ಲೀಂ ಸುಪದ್ಮರಾಗಸಂಕಾಶಚರಣಾಯೈ ನಮೋ ನಮಃ ॥

ಕಣ್ಣ ತುಂಬಾ ಕಂಡೇನಮ್ಮಾ ಕಮಲ ನೇತ್ರೇಯಾ, ವರ್ಣಿಸಲು ನನ್ನಿಂದ ತರವೇ ತ್ರಿಪುರ ಸುಂದರಿಯನ್ನ. ಕೋಟಿ ರತೀದೇವಿಯರ ಸೌಂದರ್ಯವನ್ನೂ, ಲಾವಣ್ಯವನ್ನೂ ಹೊಂದಿರುವ, ಸಹಸ್ರಾರು ಸೂರ್ಯಕಾಂತಿಯಿಂದ ಶೋಭಿಸುತ್ತಿರುವ, ಅರುಣವರ್ಣದವಳಾದ, ತ್ರಿನೇತ್ರಳೂ, ಬಾಲಚಂದ್ರನಿಂದ ಕೂಡಿದ ನವರತ್ನಮಣಿಮಯ ಕಿರೀಟದಿಂದ ಪ್ರಜ್ವಲಿಸುತ್ತಿರುವ, ಕೈಗಳಲ್ಲಿ ಪಾಶಾಂಕುಶ ಪುಷ್ಪಬಾಣಗಳನ್ನು ಹಿಡಿದು ಗಾಯತ್ರೀ ಮಂಟಪದಲ್ಲಿ ಓಂಕಾರ ಪೀಠದ ಮೇಲೆ ವಿರಾಜಮಾನಳಾಗಿರುವ ಆದಿಪರಾಶಕ್ತಿ, ತ್ರಿಪುರಸುಂದರೀ, ಶ್ರೀವಿದ್ಯಾಪರಮೇಶ್ವರೀ, ರಾಜರಾಜೇಶ್ವರೀ, ಕಾಮಾಕ್ಷೀ.

ಕಾತ್ಯಾಯಿನಿಯಾಗಿ ಕಾಂಚೀಪುರಕ್ಕೆ ಬಂದು, ಮಾವಿನ ಮರದ ಕೆಳಗೆ ಶಿವನಿಗಾಗಿ ಘೋರ ತಪಸ್ಸನ್ನು ಮಾಡಿ, ಏಕಾಮ್ರೇಶ್ವರ ಬದ್ಧ ಮಾಂಗಲ್ಯಭಾಗ್ಯ ಪಡೆದ ತಪೋ ಕಾಮಾಕ್ಷಿ, ಗಾಯತ್ರಿ ಮಂಟಪದಲ್ಲಿ ಮೂಲ ಕಾಮಾಕ್ಷಿಯ ಬಲಭಾಗದಲ್ಲಿ ಒಂದು ಕಾಲಿನ ಮೇಲೆ ನಿಂತು ತಪಸ್ಸು ಮಾಡುತ್ತಿರುವ ಭಂಗಿಯಲ್ಲಿ.

ಪ್ರತ್ಯಾಹಾರಧ್ಯಾನಸಮಾಧಿಸ್ಥಿತಿಭಾಜಾಂ
ನಿತ್ಯಂ ಚಿತ್ತೇ ನಿರ್ವೃತಿಕಾಷ್ಠಾಂ ಕಲಯಂತೀಮ್ ॥
ಸತ್ಯಜ್ಞಾನಾನಂದಮಯೀಂ ತಾಂ ತನುರೂಪಾಂ
ಗೌರೀಮಂಬಾಮಂಬುರುಹಾಕ್ಷೀಮಹಮೀಡೇ ॥

ಶಾಪಗ್ರಸ್ತಳಾಗಿ ರೂಪವಿಹೀನಳಾದ ಶ್ರೀಮಹಾಲಕ್ಷ್ಮಿ ಕಾಮಾಕ್ಷಿಯನ್ನು ಪ್ರಾರ್ಥಿಸಿ, ತನ್ನ ಸೌಂದರ್ಯವನ್ನು ಮರಳಿ ಪಡೆದು ಅಂಜನಾ ಕಾಮಾಕ್ಷಿ ಅಥವಾ ಅರೂಪ ಲಕ್ಷ್ಮಿಯಾಗಿ ಗರ್ಭಗುಡಿಯ ಎಡಭಾಗದಲ್ಲಿ, ಸೌಂದರ್ಯಲಕ್ಷ್ಮಿಯಾಗಿ ಬಲಭಾಗದಲ್ಲೂ ನೆಲೆಸಿರುವ ಮಹಾಲಕ್ಷ್ಮಿಯ ವೈಭವ. ದೇವಿಯ ಕುಂಕುಮ ಪ್ರಸಾದವನ್ನು ಅರೂಪ ಲಕ್ಷ್ಮಿಯ ಆಪಾದಮಸ್ತಕಾಂತ ಲೇಪಿಸಿ, ಅವಳ ಚರಣಾರವಿಂದಗಳಿಂದ ಸ್ವಲ್ಪ ಕುಂಕುಮವನ್ನು ಇಲ್ಲಿಯ ಪ್ರತೀತಿಯಂತೆ ಸ್ವೀಕರಿಸಿ, ನಮ್ಮ ಅಹಂಕಾರವೆಂಬ ಅರೂಪವನ್ನು ಹೋಗಲಾಡಿಸಲು ದೇವಿಯನ್ನು ಪ್ರಾರ್ಥಿಸಿ;

ಅಸುರಪ್ರಾಣಹರಣ ವಾರಾಹೀ ವೀರ್ಯನಂದಿತಾ ।

ಕಾಮೇಶ್ವರಮುಖಾಲೋಕ ಕಲ್ಪಿತಶ್ರೀಗಣೇಶ್ವರಾ ।

ಮಹಾಗಣೇಶ ನಿರ್ಭಿನ್ನ ವಿಘ್ನಯಂತ್ರಪ್ರಹರ್ಷಿತಾ ।

ಅಂತರಾಲಯದ ಎಡಭಾಗದಲ್ಲಿ ವಾರಾಹೀ, ವಿನಾಯಕ, ಸಂತಾನ ಸ್ತಂಭಗಳ ಸನ್ನಿಧಿ. ಬಂಧಕಾಸುರನ ಜೊತೆ ಸಂಗ್ರಾಮದಲ್ಲಿ ಶ್ರೀಮಾತೆಯ ಸೇನೆಗೆ ಅಧಿಪತಿಯಾಗಿ ಯುದ್ಧವನ್ನು ಮಾಡಿದ ವಾರಾಹೀ ಮತ್ತು ಯುದ್ಧದಲ್ಲಿ ಹೆಜ್ಜೆ ಹೆಜ್ಜೆಗೂ ರಾಕ್ಷಸರು ಕಲ್ಪಿಸುತ್ತಿದ್ದ ಮಾಯಾಪೂರಿತ ವಿಘ್ನಗಳನ್ನು ತನ್ನ ಮಂತ್ರಶಕ್ತಿಯಿಂದ ನಾಶಮಾಡಿದ ವಿಘ್ನೇಶ್ವರರಲ್ಲಿ ನಮ್ಮ ದಿನನಿತ್ಯದ ಸಂಗ್ರಾಮಗಳಿಂದ ವಿಮುಕ್ತಿ, ವಿಘ್ನ ನಿವೃತ್ತಿಗಾಗಿ ಪ್ರಾರ್ಥಿಸುತ್ತಾ, ವಾರಾಹಿಯ ಪಕ್ಕ ದಶರಥಾದಿಗಳಿಗೆ ಸಂತಾನ ಭಾಗ್ಯವನ್ನು ಕರುಣಿಸಿದ, ಇಂದಿಗೂ ಬೇಡಿದವರ ಪಾಲಿಗೆ ಪುತ್ರಕಾಮೇಷ್ಟಿಯಾಗಿರುವ ನಾಭಿಸ್ಥಾನದಲ್ಲಿರುವ ಭವ್ಯ ಸಂತಾನ ಸ್ತಂಭದ ದರ್ಶನ. ಗರ್ಭಗುಡಿಯ ಬಲಗಡೆ ವೈಷ್ಣವರ ಪವಿತ್ರ 108 ದಿವ್ಯದೇಶಗಳಲ್ಲಿ ಒಂದಾದ ತಿರುಕಾಳ್ವನೂರ್. ಸೌಂದರ್ಯ ಲಕ್ಷ್ಮಿಯನ್ನು ವೀಕ್ಷಿಸಲು ಕದ್ದು ಮುಚ್ಚಿ ಬಂದ ಕಳ್ವರ್ ಪೆರುಮಾಳ್ ವಿಷ್ಣು ಮತ್ತು ಶಿವಪಾರ್ವತಿಯರ ಸಂಯೋಜಿತ ರೂಪನಾದ ಅರ್ಧನಾರೀಶ್ವರನ ದರ್ಶನ.

ಬಹಿಃ ಪ್ರಾಕಾರದಲ್ಲಿ ಸ್ಥಿತಳಾಗಿರುವ ಮಂತ್ರಿಣೀ ರಾಜಶ್ಯಾಮಲಾ, ಮಾತಂಗಿಯ ಧ್ಯಾನ.

ಧ್ಯಾಯೇಯಂ ರತ್ನಪೀಠೇ ಶುಕಕಲಪಠಿತಂ ಶೃಣ್ವತೀಂ ಶ್ಯಾಮಲಾಂಗೀಂ,

ನ್ಯಸ್ತೈಕಾಂಘ್ರಿಂ ಸರೋಜೇ ಶಶಿಶಕಲಧರಾಂ ವಲ್ಲಕೀಂ ವಾದಯಂತೀಮ್ ।

ಕಲ್ಹಾರಬದ್ಧಮಾಲಾಂ ನಿಯಮಿತವಿಲಸಚ್ಚೋಲಿಕಾಂ ರಕ್ತವಸ್ತ್ರಾಂ,

ಮಾತಂಗೀಂ ಶಂಖಪಾತ್ರಾಂ ಮಧುರಮಧುಮದಾಂ ಚಿತ್ರಕೋದ್ಭಾಸಿಬಾಲಾಮ್ ॥

ಸಮಸ್ತ ಉತ್ಸವಗಳನ್ನು ಉಪಚಾರಗಳನ್ನು ಸ್ವೀಕರಿಸುವ ರಮಾವಾಣೀ ಸಮೇತ ಉತ್ಸವ ಕಾಮಾಕ್ಷಿಯ ದರ್ಶನದೊಂದಿಗೆ ನವ ಕಾಮಾಕ್ಷಿಯರ ದರ್ಶನ ಪಡೆದ ಧನ್ಯತಾಭಾವ. ದೇವಾದಿದೇವತೆಯರ

ತಪೋಭೂಮಿಯಲ್ಲಿ, ಹಯಗ್ರೀವ ಸ್ವಾಮಿ ಮತ್ತು ಅಗಸ್ತ್ಯರ ಉಪಾಸನಾ ಕ್ಷೇತ್ರದಲ್ಲಿ, ಶ್ರೀಶಂಕರಭಗವತ್ಪಾದರ ಕಾಮಕೋಟಿ ಪೀಠದಲ್ಲಿ, ರಸಾಲದ ಅದ್ಭುತ ಶಕ್ತಿಯಾಗಿ, ಏಕಾಮ್ರೇಶ್ವರರ ಶಿವಶಕ್ತಿಯಾಗಿ, ವರದರಾಜ ಸ್ವಾಮಿಯ ಅಭಯ ಶಕ್ತಿಯಾಗಿ, ಮಹಾಬಿಲದ ಚಿಚ್ಛಕ್ತಿಯಾಗಿ, ಶ್ರೀಚಕ್ರದ ಯಂತ್ರಶಕ್ತಿಯಾಗಿ, ತಪೋ ಕಾಮಾಕ್ಷಿಯ ತಪಃಶಕ್ತಿಯಾಗಿ, ಅಂಜನಾ ಕಾಮಾಕ್ಷಿಯ ಧ್ಯಾನಶಕ್ತಿಯಾಗಿ, ಉತ್ಸವ ಕಾಮಾಕ್ಷಿಯ ಚೈತನ್ಯಶಕ್ತಿಯಾಗಿ,

ಅಹಂ ವಿಭೂತ್ಯಾ ಬಹುಭಿರಿಹ ರೂಪೈರ್ಯದಾ ಸ್ಥಿತಾ ।

ಏಕೈವಾಹಂ ಜಗತ್ಯತ್ರ ದ್ವಿತೀಯಾ ಕಾ ಮಮಾ ಪರಾ ।

ಎಂದು ದೃಢೀಕರಿಸುತ್ತಾ ಪ್ರಣವ ಪೀಠದಲ್ಲಿ ಆದಿಶಕ್ತಿಯಾಗಿ ದರ್ಶನವೀಯುತ್ತಿರುವ ಕಾಮಾಕ್ಷೀ ಕಾಮದಾಯಿನೀ.

ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ।

ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥

"ಕಾಮಾಕ್ಷೀ ಲೋಕಸಾಕ್ಷಿಣೀ ಕಾಮಾರಿ ಮನೋಹರಿಣೀ

ಕಾಮಕೋಟಿ ಪೀಠವಾಸಿನೀ ಕಾಮಿತಾರ್ಥ ಶುಭಫಲದಾಯಿನೀ

ಕಾಮಾಕ್ಷೀ ಕಂಚಿ ಕಾಮಾಕ್ಷೀ ಪಾಹಿಮಾಂ ಪಾಹಿಮಾಂ ಪಾಹಿ"

ಹೃದಯ ಕಮಲದಲ್ಲಿ ನಿನ್ನ ರೂಪವನ್ನು ಜ್ಯೋತಿರೂಪದಲ್ಲಿ ದರ್ಶಿಸಿ, ಪುಲಕಿತರಾಗಿ, ತನ್ಮಯಾವಸ್ಥೆಯಲ್ಲಿಯೇ ಕೃತಿಗಳ ರಚನೆ ಮಾಡಿ, ಸಂಯೋಜಿಸಿ, ಸಂಗೀತ ಭಂಡಾರವನ್ನು ಸಮೃದ್ಧಿಗೊಳಿಸಿದ ಶಾಮಾಶಾಸ್ತ್ರಿಗಳ ಪ್ರೌಢಿಮೆಯಾಗಲೀ,

"ಏಕಾಮ್ರೇಶ ನಾಯಿಕೇ ಶಿವೇ ಏಕಾಮ್ರೇಶ ಗೃಹೇಶ್ವರೀ ಶಂಕರಿ

ಶಾತೋದರಿ ಸದ್ಭಕ್ತವಶಂಕರಿ ಕಾಮಹರಣ ಮೋಹಿತ ಪೂರ್ಣಫಲೇ

ಶ್ರೀಕಾಮಾಕ್ಷಿ ಪಾಹಿ ಪಾಹಿ ಮಾಂ"

ರಾಗದೇವತೆಗಳು ಪ್ರತಿಷ್ಠಾಪಿಸಲ್ಪಟ್ಟಿರುವ ನಾದದೇಗುಲಗಳೆಂದೇ ಕರೆಯಲ್ಪಡುವ ನವಾವರಣ ಕೃತಿಗಳ ರಚನಾಕಾರರಾದ ದೀಕ್ಷಿತರ ಪರಿಪಕ್ವತೆಯಾಗಲೀ,

ಪ್ರದೀಪಜ್ವಾಲಾಭಿಃ ದಿವಸಕರನೀರಾಜನವಿಧಿಃ

ಸುಧಾಸೂತೇಶ್ಚಂದ್ರೋಪಲಜಲಲವೈರರ್ಘ್ಯರಚನಾ ।

ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ

ತ್ವದೀಯಾಭಿರ್ವಾಗ್ಭಿಃ ತವ ಜನನಿ ವಾಚಾಂ ಸ್ತುತಿರಿಯಮ್ ॥

ಶ್ರೀಶಂಕರಭಗವತ್ಪಾದರಂತೆ ವೇದಾಂತದ, ಯೋಗಶಾಸ್ತ್ರದ, ಶ್ರೀವಿದ್ಯಾ ಮಂತ್ರ-ತಂತ್ರ ಶಾಸ್ತ್ರದ ತತ್ತ್ವಗಳನ್ನೊಳಗೊಂಡ ಅನುಪಮ ಸ್ತೋತ್ರಗಳ ರಚನೆ ಮಾಡುವ ಸಾಮರ್ಥ್ಯವಾಗಲೀ,

ವಿಮಲ ಪಟೀ ಕಮಲ ಕುಟೀ ಪುಸ್ತಕ ರುದ್ರಾಕ್ಷ ಶಸ್ತ ಹಸ್ತ ಪುಟೀ ।

ಕಾಮಾಕ್ಷೀ ಪಕ್ಷ್ಮಲಾಕ್ಷೀ ಕಲಿತ ವಿಪಂಚೀ ವಿಭಾಸಿ ವೈರಿಂಚೀ ॥

ಭಕ್ತಿ ಮತ್ತು ಆತ್ಮಸಮರ್ಪಣೆಯ ಆಧ್ಯಾತ್ಮಿಕ ಯಾತ್ರೆ - ಆರ್ಯ, ಪಾದಾರವಿಂದ, ಸ್ತುತಿ, ಕಟಾಕ್ಷ, ಮಂದಸ್ಮಿತ ಶತಕಗಳನ್ನೊಳಗೊಂಡ ಮೂಕಪಂಚಶತಿಯ ರಚನೆಯನ್ನು ಕಾಮಾಕ್ಷಿಯ ಕೃಪೆಯಿಂದ ಮಾಡಿದ ಮೂಕಶಂಕರರ ವಿದ್ವತ್ ಆಗಲೀ ಇಲ್ಲದ ನಾವು, ನಮ್ಮ ಪರಿಮಿತ ಜ್ಞಾನದಿಂದ ನಿನ್ನನ್ನು ಸ್ತುತಿಸಲು ಸಂಕಲ್ಪಿಸಿ, **ಕಾಮಾಕ್ಷೀ ವಿಲಾಸ**ದ ಪ್ರಯತ್ನ ಮಾಡಿದ್ದೇವೆ. ಇದನ್ನು, "ವಿನೋದಾಯ ಬಾಲಸ್ಯ ಮೌಖ್ಯಂ ಹಿ ಮಾತಃ ತದೇತತ್ ಪ್ರಲಾಪಸ್ತುತಿಂ ಮೇ ಗೃಹಾಣ" ನಿನ್ನ ಮಗುವಿನ ಮುಗ್ಧಮಾತುಗಳೆಂದೆಣಿಸಿ, ನಮ್ಮನ್ನು ಕ್ಷಮಿಸಿ ಅನುಗ್ರಹಿಸು ತಾಯೇ.

ಕಾಮಕೋಟಿ ಪೀಠದಲ್ಲಿ ಮಾಡಿದ ಸತ್ ಕರ್ಮಗಳಿಗೆ ಕೋಟಿಪಟ್ಟು ಫಲ ಸಿಗುವುದೆಂಬುದು ಶತಃಸಿದ್ಧ. ನಮ್ಮ ಕಿಂಚಿತ್ ಭಕ್ತಿ, ಕಾಮಾಕ್ಷಿಯ ಕೃಪೆಯಿಂದ ಕೋಟಿಪಟ್ಟು ವೃದ್ಧಿಯಾಗಿ, ಬುದ್ಧಿ ಶುದ್ಧಿಯಾಗಿ, ಬಂಧಕಾಸುರನ ತತ್ತ್ವದಲ್ಲಿರುವ ನಮ್ಮ ಅವಿದ್ಯೆ ದಗ್ಧವಾಗಿ, ನಮ್ಮ ಆಧ್ಯಾತ್ಮಿಕ ಮೋಕ್ಷ ಮಾರ್ಗದ ಪ್ರಯಾಣ ಸುಗಮವಾಗಲಿ ಎಂದು ಆಶಿಸುತ್ತಾ,

**॥ ಓಂ ಶಾಂತಿಃ ಶಾಂತಿಃ ಶಾಂತಿಃ, ಶ್ರೀಜಗದಂಬಾರ್ಪಣಮಸ್ತು ॥**

